ಶ್ರೀ ವಿ. ಮಸಿಯಪ್ಪ.—ಈ ರೈಟ್ ಅಂಡ್ ಲೆಫ್ಟ್ ಬ್ಯಾಂಕ್ ಚಾನಲ್‌ಸ್‌ನ ಕೊನೆ ಗಡಿ ಆಗಿರತಕ್ಕ ಬಿದರ ಹಳ್ಳಿ ಮೊದಲಾದ ಎರಡು ಮೂರು ಗ್ರಾಮಗಳಿಗೆ ನೀರು ನರಬರಾಯಿ ಒದಗುವುದಿಲ್ಲ ಎಂದು ಹೇಳಿ ಎಕ್ಸಿಕ್ಯೂಟಿವ್ ಇಂಜನಿಯರ ಗಮನಕ್ಕೆ ಆಗಾಗ್ಗೆ ತರುತ್ತಿರುವುದು ಸರ್ಕಾರದವರಿಗೆ ಗೊತ್ತ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಅದೇ ಚುನಾವಣಾ ಕ್ಷೇತ್ರದಿಂದ ಬಂದವರು ಎಂದು ನನ್ನ ಭಾವನೆ. ಅಲ್ಲಿ ಅನೇಕರು ಅಕ್ರಮವಾಗಿ ನೀರನ್ನು ತೆಗೆದುಕೊಂಡಿದ್ದಾರೆ. ಅಕ್ರಮವಾಗಿ ನೀರು ತೆಗೆದುಕೊಳ್ಳುವ ಅನೇಕರಿಗೆ ನೀರನ್ನು ನರಬರಾಯಿಮಾಡುವುದಕ್ಕೆ ಸಾಧ್ಯವಿಲ್ಲ. ಯಾರು ಆಥರೈಸ್ಡ್ ಅಚ್ಚುಕಟ್ಟುದಾರರಿದ್ದಾರೋ ಅವರಿಗೆ ನೀರು ಒದಗಿಸಲಾಗುತ್ತದೆ ಎಂದು ಹೇಳಿ ಸ್ಥಳೀಯ ಅಧಿಕಾರಿಗಳು ವರದಿ ಮಾಡಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಅಕ್ರಮವಾಗಿ ನೀರು ತೆಗೆದುಕೊಳ್ಳುವುದನ್ನು ಪ್ರತಿಬಂಧಿಸಲಿಕ್ಕೆ ಏನಾದರೂ ಸಾಕಾದಷ್ಟು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಮಸಿಯಪ್ಪ.—ಬಲದಡದ ಮತ್ತು ಎಡದಡದ ನಾಲೆಗಳಲ್ಲಿ ನುಮಾರು 2—3 ಮೈಲಿ ವಿಪರೀತ ಸಿಲ್ಟು ಮತ್ತು ವೀಡ್ಸ್ ಬೆಳೆದು ಅಕ್ಯುಮುಲೇಟ್ ಆಗಿರುವುದರಿಂದ ಕಾಲುವೆಯಲ್ಲಿ ನೀರು ಎಷ್ಟು ಬಿಟ್ಟರೂ ಕೂಡ ಮುಂದಕ್ಕೆ ಹರಿದುಹೋಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ಅದನ್ನು ಒಂದುಸಾರಿ ಹೇಳಿದಹಾಗೆ ಜ್ಞಾಪಕವಿದೆ. silt-up ಆಗಿದ್ದರೆ ಅದನ್ನು ತೆಗೆಸುವುದಕ್ಕೆ ಪ್ರಯತ್ನಪಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಈಗ ಅಕ್ಯುಮುಲೇಟ್ ಆಗಿರುವ ಸಿಲ್ಟ್‌ನ್ನು ಕೂಡಲೇ ತೆಗೆಸಿ ನೀರು ಸರಾಗವಾಗಿ ಹೋಗುವಂಥ ವ್ಯವಸ್ಥೆ ಮಾಡನೇ ಇದ್ದರೆ ನುಮಾರು 5—6 ಸಾವಿರ ಎಕರೆ ಪ್ರದೇಶದಲ್ಲಿ ಇರತಕ್ಕ ಬತ್ತದ ಬೆಳೆಯೆಲ್ಲಾ ಸ್ವಲ್ಪ ದಿವಸಗಳಲ್ಲೇ ಬಹಳ ನಷ್ಟಕ್ಕೆ ಒಳಗಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(No answer.)

Grant of Relief to Agriculturists and Labourers in Sorab and Shikaripur Taluks.

Q.—863. Sri H. S. RUDRAPPA (Honnali).—

Will the Government be pleased to state :—

what steps have been taken by Government to give suitable reliefs to the agriculturists and labourers in Sorab and Shikaripur Taluks affected by excess of rain as admitted by Government in replies to questions in January 1954 meetings of the Legislative Assembly ?

A.—Sri Kadidal MANJAPPA (Minister for Revenue and Public Works).—

The question of giving relief is under examination of Government.

ಶ್ರೀ ಎಚ್. ಎಸ್. ರುದ್ರಪ್ಪ.—ಎಷ್ಟು ದಿವಸಗಳಿಂದ ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಾ ಇದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ತಿಂಗಳುಗಳಿಂದ ಹಿಂದಿನ ಅಧಿವೇಶನದಲ್ಲಿ ಈ ಪ್ರಶ್ನೆ ಬಂದಿತ್ತು, ಅದರ ಮೇಲೆ ನಮ್ಮ ಅಧಿಕಾರಿಗಳಿಗೆ ವರದಿ ಕಳುಹಿಸಬೇಕೆಂದು ಹೇಳಿದ್ದೆವು, ವರದಿ ಬಂದಿದೆ. ಈಗ ಪುನಃ ಕೆಲವು ಅಂಶಗಳನ್ನು ಸ್ಪಷ್ಟೀಕರಿಸಬೇಕೆಂದು ಕೇಳಿದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ.—ಯಾವ ಅಧಿಕಾರಿಗಳು ತನಿಖೆ ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಡೆಪ್ಯುಟಿ ಕಮೀಷನರು ಮತ್ತು ರೆವಿನ್ಯೂ ಕಮೀಷನರು.

ಶ್ರೀ ಎಚ್. ಎಸ್. ರುದ್ರಪ್ಪ.—ರೆವಿನ್ಯೂ ಕಮೀಷನರು ಎಷ್ಟು ತಾಲ್ಲೂಕುಗಳನ್ನು ನೋಡಿದರು ಎಂಬ ವರದಿ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ತಾಲ್ಲೂಕುಗಳನ್ನು ನೋಡಿದರು ಎಂದು ಇಲ್ಲ. ರೆವಿನ್ಯೂ ಕಮೀಷನರು ನಾನೂ ಹೋಗಿದ್ದೆ ಎಂದು ವರದಿ ಮಾಡಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈ ರೀತಿ ತೊಂದರೆಗೀಡಾದವರಿಂದ ಈಗ ಕಂದಾಯ ವಸೂಲು ಮಾಡುತ್ತಾ ಇದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಅವರು ಏನಾದರೂ ಕಂದಾಯ ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ವರದಿ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇನೂ ಮಾಡಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಯಾವ ರೀತಿಯಾದ ಪರಿಹಾರವನ್ನು ಕೊಡಬೇಕೆಂದು ಅವರು ರೆಕಮೆಂಡ್ ಮಾಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಬಂದಿರತಕ್ಕ ವರದಿ ಪ್ರಕಾರ ಕೆಲವು ಕಡೆ 8 ಆಣೆಯಷ್ಟು ಫಸಲಾಗಿದೆ ಎಂದು ಅವರು ಹೇಳಿದ್ದಾರೆ. ಪುನಃ ಇನ್ನೂ ಕೆಲವು ಅಂಕಿಅಂಶಗಳನ್ನು ಸ್ಪಷ್ಟಪಡಿಸಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ.—ಬೆಳೆ ಆಗದೆ ಇರುವ ಪ್ರದೇಶದಲ್ಲಿ ಕಂದಾಯ ವಸೂಲು ಮಾಡಿದರೆ ಅವರಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರ ಮಾಡುತ್ತೇನೆ.

Kariyappanna Tank, Arakere, Honnali Taluk.

Q.—866. Sri H. S. RUDRAPPA (Honnali).—

Will the Government be pleased to state :—

(*a*) whether the villagers of Arakere, Honnali Taluk, have approached the Engineering Department to